ಓ:ಎಸ್:ನಂ.*28/2016*

ಪಿ.ಡಬ್ಲ್ಯೂ- *1*

***ದಿಃ 21-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿಪಿಆರ್ ವಕೀಲರಿಂದ***

ವಾದಿಯ ತಂದೆ ಮತ್ತು ಪ್ರತಿವಾದಿಯ ತಂದೆ ಅಣ್ಣತಮ್ಮಂದಿರು ಎಂದರೆ ಸರಿ. ಬಸಪ್ಪನವರು *1992* ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ಪ್ರತಿವಾದಿಯ ತಂದೆ ಮರುಳಸಿದ್ದಪ್ಪನವರು ನಾನು ಹುಟ್ಟುವುದಕ್ಕಿಂತ ಮುಂಚೆ ಮರಣ ಹೊಂದಿರುತ್ತಾರೆ. *1985* ನೇ ಸಾಲಿನಲ್ಲಿ ನಮ್ಮ ತಂದೆ ಮತ್ತು ಆತನ ಅಣ್ಣ ತಮ್ಮಂದಿರು ತಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಜುಬಾನೆ ವಿಭಾಗದ ಮೂಲಕ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ದಾವ 'ಬಿ' ಷೆಡ್ಯೂಲ್ ಸ್ವತ್ತಿನಲ್ಲಿ ನಮೂದು ಮಾಡಿರುವ ವಿಸ್ತೀರ್ಣ *12* ಅಡಿ ಅಗಲ ಮತ್ತು *200* ಅಡಿ ಉದ್ದದ ರಸ್ತೆ ಇದೆ ಎಂದು ತೋರಿಸಲು ತಮ್ಮ ಬಳಿ ಏನಾದರೂ ದಾಖಲಾತಿ ಇದೆಯೇ ಎಂದರೆ ಸಾಕ್ಷಿಯು ನಾನು ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ಛಾಯಚಿತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆಂದು ಸಾಕ್ಷ್ಯ ನುಡಿಯುತ್ತಾರೆ. ಈ ದಾವೆಯನ್ನು ಹೂಡುವುದಕ್ಕಿಂತ ಮುಂಚೆ ದಾವ ಆಸ್ತಿಗಳನ್ನು ನಾನು ಮೋಜಣಿ ಮಾಡಿಸಿರುತ್ತೇನೆ. ನಮ್ಮ ಊರಿನ ಹಿರಿಯರ ಸಮಕ್ಷಮ ಮೋಜಿಣಿ ಮಾಡಿಸಿರುತ್ತೇನೆ. ಆದರೆ ಸರ್ವೇಯರ್ ರವರ ಮುಖಾಂತರ ಸದರಿ ಸ್ವತ್ತನ್ನು ಮೋಜಿಣಿ ಮಾಡಿಸಿರುವುದಿಲ್ಲ. 'ಬಿ' ಷೆಡ್ಯೂಲ್ ನಲ್ಲಿ ನಮೂದು ಮಾಡಿರುವ ವಿಸ್ತೀರ್ಣ ಒಂದು ಅಂದಾಜಿನ ಮೇಲೆ ನಾನು ನಮೂದು ಮಾಡಿರುತ್ತೇನೆ ಎಂದರೆ ಸರಿ. 'ಬಿ' ಷೆಡ್ಯೂಲ್ ದಾವ ಸ್ವತ್ತು, ಸರ್ವೇ ನಂಬರ್ *92/3* ರ ಪಶ್ಚಿಮದ ಕಡೆ ಬರುತ್ತದೆ. ಸರ್ವೆ ನಂ.*92/*ಬಿ ರ *1* ಎಕರೆ *34* ಗುಂಟೆ, ಸದರಿ ಜಮೀನಿನಲ್ಲಿ *1* ಎಕರೆ *18* ಗುಂಟೆ ನಮ್ಮ ಹೆಸರಿಗೆ ಬಂದಿದ್ದು, ಅದೇ ರೀತಿ ಪ್ರತಿವಾದಿಯ ಹೆಸರಿಗೆ ಸದರಿ ಸರ್ವೆ ನಂಬರ್ ನಲ್ಲಿ *16* ಗುಂಟೆ ಜಮೀನು ಬಂದಿದ್ದು, ಸರ್ವೆ ನಂ.*92/3* ರಲ್ಲಿ *1* ಎಕರೆ *18* ಗುಂಟೆ ವಿಸ್ತೀರ್ಣ ಇದ್ದು, ಸದರಿ ಜಮೀನಿನಲ್ಲಿ *34* ಗುಂಟೆ ವಿಸ್ತೀರ್ಣ ಜಮೀನು ನನಗೆ ಬಂದಿದ್ದು, ಅದೇ ರೀತಿ ಸದರಿ ಸರ್ವೆ ನಂಬರಿನಲ್ಲಿ *20* ಗುಂಟೆ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ. ಸರ್ವೆ ನಂ.*92/3* ರ ಪ್ರತಿವಾದಿಗೆ ಬಂದಿರುವ *24* ಗುಂಟೆ ಜಮೀನಿನ ದಕ್ಷಿಣದ ಕಡೆಗೆ *12* ಇಂಟು *200* ಅಡಿ ದಾರಿ ನನಗೆ ಬಿಟ್ಟು ಕೊಟ್ಟ ಕಾರಣ ನನಗೆ ಸೇರಿದ ಜಮೀನಿನಲ್ಲಿ ಅಷ್ಟು ವಿಸ್ತೀರ್ಣವನ್ನು ನಾನು ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತೇನೆ. ಸದರಿ ವಿಚಾರವನ್ನು ನಾನು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ದಾವ 'ಎ'

ಷೆಡ್ಯೂಲ್ ಸ್ವತ್ತು ನಮ್ಮ ತಂದೆ ಕಡೆಯಿಂದ ನನ್ನ ಹೆಸರಿಗೆ ವಿಭಾಗದ ಮುಖೇನ ಬಂದಿರುತ್ತದೆ. ನಮ್ಮ ತಂದೆಗೆ ಮೂರು ಜನ ಮಕ್ಕಳು, 1) ಚಂದ್ರಶೇಖರಪ್ಪ, 2) ಎನ್ ಬಿ ಶಾಂತಪ್ಪ, 3) ಎನ್ ಬಿ. ಕಾಂತರಾಜ್. ನಾನು ಮತ್ತು ನನ್ನ ಅಣ್ಣತಮ್ಮಂದಿರು 2000ನೇ ಸಾಲಿನಲ್ಲಿ ಜುಬಾನೆ ವಿಭಾಗ ಮಾಡಿಕೊಂಡಿರುತ್ತೇವೆ. ದಾವ ಷೆಡ್ಯೂಲ್ ಸ್ವತ್ತುಗಳಲ್ಲಿ ನಮೂದು ಮಾಡಿರುವ ಚಕ್ಕುಬಂದಿಗೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***